# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 846(863) |
| ಮಾನ್ಯ ಸದಸ್ಯರ ಹೆಸರು | : | ಡಾ:ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 24.08.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಹಳೆಯ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿರುವ ಬೆಂಗಳೂರು ವಿಶ್ವವಿದ್ಯಾಲಯದ ಕೋಟ್ಯಂತರ ರೂಪಾಯಿ ಬೆಲೆಬಾಳುವ 83 ಎಕರೆ ಜಮೀನು ಒತ್ತುವರಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 83 ಎಕರೆ ಜಮೀನು ಒತ್ತುವರಿ ಆಗಿರುವುದಿಲ್ಲ. ಭೂದಾಖಲೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕು, ಬೆಂಗಳೂರು ಇವರ ಜೊತೆ ಬೆಂಗಳೂರು ವಿಶ್ವವಿದ್ಯಾಲಯವು ಜಂಟಿ ಸರ್ವೇ ಕಾರ್ಯ ನಡೆಸಿದಾಗ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಒಟ್ಟು 31 ಎಕರೆ 27 ಗುಂಟೆ ಜಮೀನು ಒತ್ತುವರಿ ಆಗಿರುವುದು ಕಂಡು ಬಂದಿರುತ್ತದೆ.<br><br>ಸದರಿ ಒತ್ತುವರಿಯನ್ನು ಹೊರತುಪಡಿಸಿ, ಈಗಾಗಲೇ 6 ಎಕರೆ 18 ಗುಂಟೆ ಜಮೀನನ್ನು ಒತ್ತುವರಿದಾರರಿಂದ ಬೆಂಗಳೂರು ವಿಶ್ವವಿದ್ಯಾಲಯವು ಸ್ವಾಧೀನಕ್ಕೆ ಪಡೆದಿರುತ್ತದೆ. |
| (ಆ) | ಬಂದಿದ್ದಲ್ಲಿ, ಯಾವ ಯಾವ ಸಂಸ್ಥೆಗಳು ಅಥವಾ ಸಾರ್ವಜನಿಕರು ಒತ್ತುವರಿ ಮಾಡಿಕೊಂಡಿದ್ದಾರೆ; ಹಾಗೂ ಒತ್ತುವರಿ ಮಾಡಿಕೊಂಡಿರುವವರ ಮೇಲೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ; | ಒತ್ತುವರಿ ಮಾಡಿರುವ ಸಂಸ್ಥೆಗಳು:<br><br>1. ಪಾಂಚಜನ್ಯ ವಿದ್ಯಾ ಪೀಠ ಟ್ರಸ್ಟ್ (ಡಾ.ಬಿ.ಆರ್. ಅಂಬೇಡ್ಕರ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ), ಮಲ್ಲತ್ತಹಳ್ಳಿ ಗ್ರಾಮ. ಈ ಸಂಸ್ಥೆಯ ವಿರುದ್ಧ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ R.F.A 1355/2010 ಪ್ರಕರಣವು ದಾಖಲಾಗಿದ್ದು, ಪ್ರಕರಣವು ಬಾಕಿ ಇರುತ್ತದೆ.<br>2. ಕನ್ಯಾಕುಮಾರಿ ವಿದ್ಯಾ ಸಂಸ್ಥೆ, ಮಲ್ಲತ್ತಹಳ್ಳಿ ಗ್ರಾಮ.ಈ ಸಂಸ್ಥೆಯ ವಿರುದ್ಧ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ R.F.A 2474/2024 ಪ್ರಕರಣವು ದಾಖಲಾಗಿದ್ದು, ಪ್ರಕರಣವು ಬಾಕಿ ಇರುತ್ತದೆ.<br>3. ಜೈ ಭೀಮ್ ಮೆಮೋರಿಯಲ್ ಟ್ರಸ್ಟ್, ಕೆಂಚೇನಹಳ್ಳಿ ಗ್ರಾಮ. ಈ ಸಂಸ್ಥೆಯ ವಿರುದ್ಧ ಮಾನ್ಯ ಕರ್ನಾಟಕ |

| | | |
|---|---|---|
| | | ಉಚ್ಚ ನ್ಯಾಯಾಲಯದಲ್ಲಿ R.F.A 49171/2017 ಪ್ರಕರಣವು ದಾಖಲಾಗಿದ್ದು, ಪ್ರಕರಣವು ಬಾಕಿ ಇರುತ್ತದೆ.<br><br>ಒತ್ತುವರಿ ಮಾಡಿರುವ ಸಾರ್ವಜನಿಕರು:<br><br>1. ಶ್ರೀಮತಿ ರುಕ್ಮಣಿ ಮತ್ತು ಮಕ್ಕಳು ( ಲೇ.ಶ್ರೀನಿವಾಸ್) ನಾಯಂಡಹಳ್ಳಿ ಗ್ರಾಮ, ಇವರ ವಿರುದ್ಧ ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ O.S. 6203/2024 ಪ್ರಕರಣವು ದಾಖಲು ಆಗಿರುತ್ತದೆ. ಸದರಿ ಪ್ರಕರಣವು ಬಾಕಿ ಇರುತ್ತದೆ.<br>2. ಶ್ರೀ ಶ್ರೀನಿವಾಸ್, ನಾಯಂಡಹಳ್ಳಿ ಗ್ರಾಮ, ಇವರ ವಿರುದ್ಧ ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ EX.P.266/2021 ಪ್ರಕರಣವು ದಾಖಲಾಗಿದ್ದು, ಈ ಪ್ರಕರಣವು ವಿಚಾರಣೆಗೆ ಬಾಕಿ ಇದೆ.<br>3. ಶ್ರೀ ನಾಗರಾಜು (ಸೂರಪ್ಪ ಫಾರ್ಮ್ಸ್), ನಾಗರಭಾವಿ ಗ್ರಾಮ<br>4. ಶ್ರೀ ಎನ್. ಮೂರ್ತಿ, ನಾಗರಭಾವಿ ಗ್ರಾಮ.<br>5. ಎನ್.ಜಿ.ಇ.ಎಫ್ ಬಡಾವಣೆಯ ನಿವಾಸಿಗಳು, ನಾಗರಭಾವಿ ಗ್ರಾಮ.<br>6. ಬಿ.ಡಿ.ಎ ಬಡಾವಣೆ ನಿವಾಸಿಗಳು, ನಾಗರಭಾವಿ ಗ್ರಾಮ.<br><br>ಇವರುಗಳ ವಿರುದ್ಧ ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ (36 + 03 ಸಂಸ್ಥೆ ಒಟ್ಟು 39 ಪ್ರಕರಣ) ವಿರುದ್ಧ ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇರುತ್ತವೆ.<br><br>ಉಳಿದ ಒತ್ತುವರಿದಾರರ ಮಾಹಿತಿಗಳನ್ನು ಕಲೆ ಹಾಕಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಉಳಿದ ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಲಾಗುವುದು. |
| (ಇ) | ಸರ್ಕಾರದ ದಾಖಲೆ ಪ್ರಕಾರ ವಿಶ್ವವಿದ್ಯಾಲಯವು ಎಷ್ಟು ಎಕರೆ ಜಮೀನು ಹೊಂದಿದೆ. ಇರುವಂತಹ ಭೂಮಿಯನ್ನು ಯಾವ ಯಾವ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ಕೈಗೊಂಡಿದೆ; | ಸರ್ಕಾರದ ದಾಖಲೆಗಳ ಪ್ರಕಾರ ಬೆಂಗಳೂರು ವಿಶ್ವವಿದ್ಯಾಲಯವು 1,201 ಎಕರೆ 23 ಗುಂಟೆ ಜಮೀನು ಹೊಂದಿದೆ.<br><br>ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಸುಮಾರು 73 ಕಟ್ಟಡಗಳು (42 ಪಿ.ಜಿ ವಿಭಾಗಗಳು, 08 ವಿದ್ಯಾರ್ಥಿಗಳ ವಸತಿ ನಿಲಯಗಳು, 02 ಘಟಕ ಕಾಲೇಜುಗಳು, ಆಡಳಿತ ಬ್ಲಾಕ್, ಪರೀಕ್ಷಾ ಶಾಖೆ, NSS ಭವನ, ಗ್ರಂಥಾಲಯ, ಕ್ರೀಡಾ ಕೇಂದ್ರ, ವಿಭಾಗಗಳು, ಬಯೋಪಾರ್ಕ್ ಮತ್ತು ಇತ್ಯಾದಿ) ಹೊಂದಿರುವ ಸುಮಾರು 832 ಎಕರೆ ಭೂಮಿಯನ್ನು ಬಳಸಲಾಗುತ್ತಿದೆ. |

| | | |
|---|---|---|
| (ಈ) | ವಿಶ್ವವಿದ್ಯಾಲಯಗಳ ಒಡೆತನದ ಭೂಮಿಯನ್ನು ಎಷ್ಟು ಖಾಸಗಿ ಸಂಸ್ಥೆಗಳಿಗೆ ಹಾಗೂ ಸರ್ಕಾರಿ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ; ಇವುಗಳಿಂದ ವಿಶ್ವವಿದ್ಯಾಲಯಕ್ಕೆ ಬರುತ್ತಿರುವ ಆದಾಯ ಎಷ್ಟು? | ಬೆಂಗಳೂರು ವಿಶ್ವವಿದ್ಯಾಲಯದ ಒಡೆತನದಲ್ಲಿ ಯಾವುದೇ ಖಾಸಗಿ ಸಂಸ್ಥೆಗಳಿಗೆ ಜಮೀನು ನೀಡಿರುವುದಿಲ್ಲ. ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಹಾಗೂ ಸರ್ಕಾರದ ಅನುಮತಿ ಪಡೆದು ಒಟ್ಟು 23 ಸಂಸ್ಥೆಗಳಿಗೆ (283 ಎಕರೆ 15 ಗುಂಟೆ ಜಮೀನು) ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ. ಸಂಸ್ಥೆಗಳಿಂದ ಬೆಂಗಳೂರು ವಿಶ್ವವಿದ್ಯಾಲಯಕ್ಕೆ 2025-26ನೇ ಸಾಲಿಗೆ ಒಟ್ಟು ರೂ.20,57,849/- ಆದಾಯವಾಗಿದೆ. |

**ಸಂಖ್ಯೆ: ಇಡಿ 375 ಯುಬಿವಿ 2026**

**(ಬಸವರಾಜ ರಾಯರಡ್ಡಿ)**
ಉನ್ನತ ಶಿಕ್ಷಣ ಸಚಿವರು